MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | SATURDAY | 3-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಮಲೇಶಿಯನ್ ಪಾಮೆಣ್ಣೆ ದರ ತೀವ್ರ ಕುಸಿತ, ಮತ್ತೆ ಚೇತರಿಕೆ

ಮಲೇಶಿಯನ್ ಪಾಮೆಣ್ಣೆ ದರ ತೀವ್ರ 6 ಶೇಕಡಾ ಕುಸಿತವಾಗಿ ಮತ್ತೆ ಸ್ವಲ್ಪ ಮಟ್ಟಿನ ಚೇತರಿಕೆ ಆಗಿದೆ. ದುರ್ಬಲ ರಫ್ತುನಿಂದಾಗಿ 2 ವರ್ಷ 6 ತಿಂಗಳಿಗಿಂತ ಕನಿಷ್ಠ ಮಟ್ಟ ತಲುಪಿದೆ. ಆಗಷ್ಟ್ ಫ್ಯೂಚರ್ ದರ 2 ಶೇಕಡಾ 64 ರಿಂಗಿಟ್ಸ್ ಇಳಿಕೆಯಾಗಿ ಟನ್‌ಗೆ 3265 ರಿಂಗಿಟ್ಸ್ ($ 708.04) ಆಗಿದೆ. ಭಾರತ ಪಾಮೆಣ್ಣೆ, ಸೋಯಾ ಎಣ್ಣೆ ಹಾಗೂ ಚಿನ್ನದ ಮೂಲ ಆಮದು ಬೆಲೆ ಇಳಿಕೆ ಮಾಡಿದೆ.

### ಪ್ರತಿಬ್ಲಾಕ್ ನಲ್ಲೂ ಆಹಾರ ಧಾನ್ಯ ಸಂಗ್ರಹಣಾಗಾರ ನಿರ್ಮಾಣ

ಸರಕಾರ ಅತಿ ದೊಡ್ಡ ಜಾಗತಿಕ ಆಹಾರ ಧಾನ್ಯ ಸಂಗ್ರಹಣಾ ಯೋಜನೆಯನ್ನು ದೇಶದ ಪ್ರತಿ ಬ್ಲಾಕ್‌ಗಳಲ್ಲೂ ಸಂಗ್ರಹಣಾಗಾರ ನಿರ್ಮಿಸುವ ಮೂಲಕ ಪರಿಚಯಸಲುದ್ದೇಶಿಸಿದೆಯೆನ್ನಲಾಗಿದೆ. ಸಹಕಾರಿ ಸಂಘಗಳ ಮೂಲಕ ರೂ.1 ಲಕ್ಷ ಕೋಟಿ ಹಣ ಬಿಡುಗಡೆಯೊಂದಿಗೆ ಯೋಜನೆ ಆರಂಭವಾಗಲಿದ್ದು, ಪ್ರತಿ ಬ್ಲಾಕ್‌ಗಳಲ್ಲಿ 2 ಸಾವಿರ ಟನ್ ಸಾಮರ್ಥ್ಯದ ಸಂಗ್ರಹಣಾಗಾರ ಹೊಂದಿ ಆಹಾರ ಧಾನ್ಯ ವ್ಯರ್ಥವಾಗಿ ನಷ್ಟವಾಗುವುದನ್ನು ತಪ್ಪಿಸಲಾಗುವುದೆನ್ನಲಾಗಿದೆ. ಇದಕ್ಕೂ ಅಂತರ್ ಸಚಿವಾಲಯ ಸಮಿತಿ ರಚನೆಯಾಗಲಿದೆಯೆನ್ನಲಾಗಿದೆ. ಆಮದು ಅವಲಂಬನೆ, ರೈತರಿಂದ ಹತಾಶು ಮಾರಾಟಕ್ಕೆ ಕಡಿವಾಣ ಹಾಗುವುದರೊಂದಿಗೆ ಗ್ರಾಮೀಣ ಉದ್ಯೋಗಕ್ಕೂ ಸಹಕಾರಿಯಾಗಲಿದೆಯೆನ್ನಲಾಗಿದೆ.

### ಸಕ್ಕರೆ ರಫ್ತು ಕೋಟಾ ಪೂರ್ತಿ ರಫ್ತಾದ ಸಕ್ಕರೆ

ಈ ವರ್ಷಕ್ಕೆ ನಿಗದಿ ಮಾಡಿದ್ದ 6.1 ಮಿಲಿಯನ್ ಟನ್ ರಫ್ತು ಅವಕಾಶದ ಪೂರ್ತಿ ಕೋಟಾ 6.1 ಮಿಲಿಯನ್ ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದೆ. ಅಧಿಕ ರಫ್ತು ಅವಕಾಶ ಲಭಿಸುವ ಸಾಧ್ಯತೆ ಕಡಿಮೆಯೆನ್ನಲಾಗಿದೆ. ಪ್ರತಿ ಟನ್‌ಗೆ ರೂ.50 ಸಾವಿರ ( $ 604.6) ಲಭಿಸುತ್ತಿದೆಯೆನ್ನಲಾಗಿದೆ ( ರಫ್ತಾದ ಸಕ್ಕರೆಗೆ) ಹಿಂದಿನ ಸೀಸನ್‌ನಲ್ಲಿ 11 ಮಿಲಿಯನ್ ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದೆ. ಈ ವರ್ಷದ ಉತ್ಪಾದನೆ ಹಿಂದಿನ ವರ್ಷದ 35.8 ಮಿಲಿಯನ್ ಟನ್‌ಗಳಿಂದ 32.8 ಮಿಲಿಯನ್ ಟನ್ ಗಳಿಗೆ ಕುಸಿಯಲಿದೆಯೆನ್ನಲಾಗಿದೆ.

### ನಂದಿನಿ ಡೈರಿ ಸ್ಟಾಲ್‌ಗಳಂತೆ ತರಕಾರಿ ಸ್ಟಾಲ್(ಅಮೃತ ಮಳಿಗೆ) ಯೋಜನೆ

ಕರ್ನಾಟಕದಾದ್ಯಂತ ನಂದಿನಿ ಡೈರಿ ಸ್ಟಾಲ್ ಮಾದರಿಯಲ್ಲಿ ಅಮೃತ ಮಳಿಗೆ ಹೆಸರಿನ ತರಕಾರಿ ಸ್ಟಾಲ್ ಆರಂಭಿಸಲು ಯೋಜಿಸಲಾಗಿದೆಯೆಂದು ಕರ್ನಾಟಕ ರಾಜ್ಯ ಕೃಷಿ ಸಚಿವ ಚೆಲುವರಾಯಸ್ವಾಮಿ ಹೇಳಿದ್ದಾರೆನ್ನಲಾಗಿದೆ.

### ಕುಸಿತಕ್ಕೊಳಗಾದ ಜೋಳ ದರ ಉತ್ತಮಗೊಳ್ಳುವ ಸಾಧ್ಯತೆ

ಅಧಿಕ ಉತ್ಪಾದನೆ, ದೇಶೀ ಹಾಗೂ ರಫ್ತು ಬೇಡಿಕೆ ಇಳಿಕೆಯಿಂದ ಜೋಳ, ಕಾರ್ನ್ ದರ ಕುಸಿತಕ್ಕೊಳಗಾಗಿ ಹಿಂದಿನ 2 ವರ್ಷಗಳ ಕನಿಷ್ಠ ಮಟ್ಟ ತಲುಪಿದ್ದು, ಮುಂದಿನ ದಿನಗಳಲ್ಲಿ ದರ ಉತ್ತಮಗೊಳ್ಳುವ ಸಾಧ್ಯತೆಗಳಿವೆಯೆನ್ನಲಾಗಿದೆ. ಮುಂದಿನ ಬಿತ್ತನೆಯ ಪ್ರಗತಿ ದರದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ. ಹವಾಮಾನ ವೈಪರೀತ್ಯದಿಂದ ಬಿತ್ತನೆ ಇಳಿಕೆಯಾದಲ್ಲಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ.